**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ**
**ಘನ ನ್ಯಾಯಾಲಯದಲ್ಲಿ**

**ಪ್ರಕರಣ ಸಂಖ್ಯೆಃ ಸ್ಪೆಷಲ್ ಕೇಸ್ 6/2014**

**ದಿನಾಂಕಃ 11.09.2025**
**(ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.)**

**ಪ್ರಾ.ಸಾಃ 5 (ಚಾ.ಸಾ.5)**

| | | |
|---|---|---|
| **ಹೆಸರು** | ಃ | **ಸೌಮ್ಯ** |
| **ತಂದೆಯ ಹೆಸರು** | ಃ | **ಕೃಷ್ಣಪ್ಪ** |
| **ವಯಸ್ಸು** | ಃ | **30 ವರ್ಷ** |
| **ಉದ್ಯೋಗ** | ಃ | **ಗೃಹಿಣಿ** |
| **ವಾಸ ಸ್ಥಳ** | ಃ | **ಎಂ.ಎನ್. ಹೊಸಹಳ್ಳಿ** |

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನನಗೆ ಪ್ರಾ.ಸಾ.1 ರವರು ಗೊತ್ತು. ಅವರು ನನ್ನ ಸೋದರ ಮಾವ. ಅವರು ವ್ಯವಸಾಯಗಾರರು ಮತ್ತು ರಾಮಪುರ ಗ್ರಾಮ ಪಂಚಾಯಿತಿಯಲ್ಲಿ ಕಾಮಗಾರಿ ಕೆಲಸ ಮಾಡುತ್ತಿದ್ದರು. 1ನೇ ಆರೋಪಿ ರಾಮಪುರ ಗ್ರಾಮ ಪಂಚಾಯಿತಿಯ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದರು. ನನ್ನ ಮಾವ ಮಾಡುತ್ತಿದ್ದ ಕಾಮಗಾರಿ ಕೆಲಸದ ಸಂಬಂಧ 1ನೇ ಆರೋಪಿ ಲಂಚಕ್ಕೆ ಒತ್ತಾಯ ಮಾಡುತ್ತಿದ್ದರು ಮತ್ತು ಆ ವಿಷಯವನ್ನು ನನ್ನ ಮಾವ ನನಗೆ ತಿಳಿಸಿದರು.

2. ನನ್ನ ಮಾವನಿಗೆ ಮೊಬೈಲ್ ಆಪರೇಟ್ ಮಾಡುವುದು ಗೊತ್ತಿಲ್ಲದೇ ಇದ್ದುದರಿಂದ ಅವರು ಕೇಳಿದಾಗ ಅದನ್ನು ನಾನು ಆಪರೇಟ್ ಮಾಡಿಕೊಟ್ಟಿದ್ದೇನೆ. ಚನ್ನಪಟ್ಟಣದಲ್ಲಿರುವ 1ನೇ ಆರೋಪಿಯ ಆಫೀಸ್ ನಲ್ಲಿ ನಾನು ನನ್ನ ಮಾವನಿಗೆ ಅಲ್ಲಿ ನಡೆಯುವ ಸಂಭಾಷಣೆಯನ್ನು ರೆಕಾರ್ಡ್ ಮಾಡುವ ಸಲುವಾಗಿ ಮೊಬೈಲನ್ನು ಆಪರೇಟ್ ಮಾಡಿಕೊಟ್ಟಿದ್ದೇನೆ. 1ನೇ ಆರೋಪಿಯ ಆಫೀಸ್ ನಿಂದ ನನ್ನ ಮಾವ ಹೊರಗೆ ಬಂದಾಗ ರೆಕಾರ್ಡಿಂಗ್ ರನ್ನಿಂಗ್ ನಲ್ಲಿ ಇತ್ತು ಮತ್ತು ಆಫೀಸ್ ನ ಒಳಗಡೆ

ನಡೆದ ಸಂಭಾಷಣೆ ರೆಕಾರ್ಡ್ ಆಗಿತ್ತು. ದಿಃ**21.11.2012** ರಂದು ಆ ಸಂಭಾಷಣೆ ರೆಕಾರ್ಡ್ ಆಗಿದೆ.

**3.** ನಂತರ ಆ ಆಫೀಸ್ ನಿಂದ ನನ್ನನ್ನು ನನ್ನ ಮಾವ ರಾಮನಗರ ಲೋಕಾಯುಕ್ತ ಕಛೇರಿಗೆ ಕರೆದುಕೊಂಡು ಹೋಗಿದ್ದರು. ನನ್ನ ಮಾವನಿಗೆ ಸರಿಯಾಗಿ ಬರೆಯಲು ಬರದೇ ಇದ್ದುದರಿಂದ ದೂರನ್ನು ಬರೆಸುವುದಕ್ಕೆ ನನ್ನನ್ನು ಅಲ್ಲಿಗೆ ಕರೆದುಕೊಂಡು ಹೋದರು. ನಾನು ದೂರನ್ನು ಬರೆದುಕೊಟ್ಟಿದ್ದೇನೆ. ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನಿಪಿ.**1** ಆ ದೂರು ಎಂದು ಗುರುತಿಸಿದ್ದಾರೆ. ನಾನು ಈ ಬಗ್ಗೆ ಲೋಕಾಯುಕ್ತ ಪೊಲೀಸರಿಗೆ ಹೇಳಿಕೆಯನ್ನು ಕೊಟ್ಟಿದ್ದೇನೆ.

**(ಆರೋಪಿಯು ಅವರ ಲಾಯರ್ ನಿಂದ ಕಡತವನ್ನು ವಾಪಸ್ಸು ತೆಗೆದುಕೊಂಡಿದ್ದೇನೆ ಎಂದು ಬೇರೆ ಲಾಯರನ್ನು ನೇಮಿಸಿಕೊಳ್ಳುತ್ತೇನೆ ಎಂದು ಕಾಲಾವಕಾಶವನ್ನು ಕೋರಿದ್ದಾರೆ, ಆದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು)**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ಬಿ.ವಿ. ರೇಣುಕ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**

**4.**

**5.**

**6.**

**7.**

<u>ವಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>

**2.**

**3.**

<u>ಮರುವಿಚಾರಣೆಃ ಇಲ್ಲ.</u>

<u>(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).</u>

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.

(ಬಿ.ವಿ. ರೇಣುಕ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.

(ಈ ಹಂತದಲ್ಲಿ ಸದರಿ ಸಾಕ್ಷಿಯು ಅಭಿಯೋಜನ ಪಕ್ಷದ ಪ್ರಕರಣಕ್ಕೆ ಅನುಗುಣವಾಗಿ ಸಾಕ್ಷ್ಯ ನುಡಿಯುತ್ತಿಲ್ಲವಾದ ಕಾರಣ ಆತನನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದರ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅಭಿಯೋಜಕರ ವಾಟೀ ಸವಾಲಿಗೆ ಅನುಮತಿ ನೀಡಲಾಗಿದೆ.)

<u>ವಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ ಃ</u>